**<u>ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಅರಕಲಗೂಡು.</u>**

**ಅಪರಾಧ ಪ್ರಕರಣ ಸಂಖ್ಯೆ: 59/2019**

| | | |
|---|---|---|
| **ಸಾಕ್ಷಿಯ ಹೆಸರು** | ಈರೇಗೌಡ | ಚಾಸಾ-4 |
| **ತಂದೆಯ ಹೆಸರು** | ದೇವೇಗೌಡ | |
| **ಉದ್ಯೋಗ** | ಪಟ್ಟಣ ಪಂಚಾಯ್ತಿ ನೌಕರ | ಪ್ರಾ.ಸಾ-8 |
| **ವಾಸ ಸ್ಥಳ** | ಹೆಚ್ ಆರ್ ಪಿ , ವಡ್ಡರಹಳ್ಳಿ | |
| **ದಿನಾಂಕ: 04.06.2026** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು. | | |

**<u>ಮುಖ್ಯ ವಿಚಾರಣೆ:</u>** ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ

ಆರೋಪಿತರು ನನ್ನ ಅಣ್ಣ ಅವರ ಹೆಂಡತಿ ಮತ್ತು ಮಕ್ಕಳು. ಚಾಸಾ 1 ನನ್ನ ಪತ್ನಿ , ಚಾಸಾ 2 ನನ್ನ ಮಗ. ದಿ: 06.11.2018 ರಂದು ದೀಪಾವಳಿ ಹಬ್ಬ ಇದ್ದು ನಾನು , ಚಾಸಾ 1 ಮತ್ತು 2 ರವರನ್ನು ನೈಗೆರೆ ಗ್ರಾಮದಲ್ಲಿ ನನ್ನ ಮನೆಗೆ ಬಿಟ್ಟು ನಾನು ನನ್ನ ಜಮೀನಿನ ಬಳಿ ಹೋಗಿದ್ದೆ. ಆ ಕಾಲಕ್ಕೆ ನನ್ನ ಪತ್ನಿ ಮನೆಯಲ್ಲಿದ್ದಾಗ ವಿದ್ಯುತ್ ಇರಲಿಲ್ಲ ಆಗ ಗ್ರಾಮಪಂಚಾಯ್ತಿ ಸದಸ್ಯರಾದ ರಾಮಚಂದ್ರ ರವರಿಗೆ ನನ್ನ ಪತ್ನಿ ಕರೆ ಮಾಡಿ ವಿದ್ಯುತ್ ಬಗ್ಗೆ ವಿಚಾರಿಸಿದಾಗ ಸಂಜೆ ಬರುವುದಾಗಿ ತಿಳಿಸಿದರು. ಅಷ್ಟರಲ್ಲಿ 1ನೇ ಆರೋಪಿ ಮನೆ ಬಳಿ ಬಂದು ನನ್ನ ಪತ್ನಿಗೆ ಕೆಟ್ಟ ಶಬ್ದಗಳಿಂದ ಬೈದು ರಟ್ಟೆಗೆ ದೊಣ್ಣೆಯಿಂದ ನನ್ನ ಪತ್ನಿಗೆ ಹೊಡೆದರು. 2 ಮತ್ತು 3ನೇ ಆರೋಪಿಗಳು ಚಾಸಾ 1 ರವರ ಕಿಬ್ಬೊಟ್ಟೆಗೆ ಒದ್ದರು. 3 ಮತ್ತು 4ನೇ ಆರೋಪಿಗಳು ಚಾಸಾ 1 ರವರ ಮುಂದೆಲೆ ಹಿಡಿದು ಎಳೆದಾಡಿದರು. ಚಾಸಾ 2 ಮತ್ತು 3 ರವರು ಚಾಸಾ 1 ರವರನ್ನು ಅರಕಲಗೂಡು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ನಾನು ನೇರವಾಗಿ ಆಸ್ಪತ್ರೆಗೆ ಹೋದೆನು. ನಾನು ಆಸ್ಪತ್ರೆಯಲ್ಲಿ ಹೊರಗೆ ನಿಂತಿದ್ದೆ , ಆಗ 1ನೇ ಆರೋಪಿಯ ಅಳಿಯ 5ನೇ ಆರೋಪಿ ಅಲ್ಲಿಗೆ ಬಂದು ಚಾಸಾ 1 ರವರಿಗೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆ.

ಚಾಸಾ 1 ರವರ ಕಿಬ್ಬೊಟ್ಟೆ ಬಳಿ ರಕ್ತಸ್ರಾವವಾಗುತ್ತಿತ್ತು ಆ ಕಾರಣ ಅರಕಲಗೂಡು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುವುದಿಲ್ಲ ಎಂದರು ಹಾಗಾಗಿ ಹಾಸನದ ಆಸ್ಪತ್ರೆಗೆ ಕರೆದುಕೊಂಡು ಹೋದೆನು.

ದಿ: 09.11.18 ರಂದು ಅರಕಲಗೂಡು ಪೊ ಠಾಣೆಗೆ ದೂರು ನೀಡಿರುತ್ತೇನೆ. 1ನೇ ಆರೋಪಿ ಜಮೀನು ನಾಲೆಗೆ ಹೋಗಿದ ಬಾಬ್ತು ಪರಿಹಾರದ ಹಣವನ್ನು ಸಂಪೂರ್ಣವಾಗಿ ಒಬ್ಬನೇ ಪಡೆದಿದ್ದು ನನಗೆ ನೀಡಿಲ್ಲ ಹಾಗಾಗಿ ಆರೋಪಿತರಿಗೆ ನಮ್ಮ ಮೇಲೆ ವೈಷಮ್ಯ ಇರುತ್ತದೆ. ನ್ಯಾ.ದ ಮುಂದಿರುವ ಎಂ ಒ 1 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈ ವಿಚಾರವಾಗಿ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿದಾರ ಭಾಗಶ: ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಗೆ ಪಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ, ಪಾಟೀ ಸವಾಲಿಗಾಗಿ ಅನುಮತಿಯನ್ನು ನೀಡಲಾಯಿತು)**

**<u>ಪಾಟೀ ಸವಾಲುಃ</u>** ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ.

1ನೇ ಆರೋಪಿ ಚಾಸಾ 1 ರವರ ಮನಾಕ್ಕೆ ಕುಂದು ಉಂಟಾಗುವಂತೆ ನಡೆದುಕೊಂಡಿರುತ್ತಾರೆ ಎಂದರೆ ಸರಿ. 3ನೇ ಆರೋಪಿ ಚಾಸಾ 1 ರವರಿಗೆ ಕೈಯಿಂದ ಕಪಾಲಕ್ಕೆ , ಮೈ ಕೈಗೆ ಹೊಡೆದಿರುತ್ತಾರೆ ಎಂದರೆ ಸರಿ. 1 ರಿಂದ 3ನೇ ಆರೋಪಿತರು ಸಹಾ ಚಾಸಾ 1 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ.

**<u>ಪಾಟೀ ಸವಾಲುಃ</u>** ಆರೋಪಿ ಪರ ವಕೀಲರು **ಶ್ರೀ. ಎಂ.ಎನ್ .ಆರ್.**ರವರಿಂದ.

ಪಾಟೀ ಸವಾಲಿಗೆ ಕಾಲಾಕವಾಶ ಕೋರಿದ್ದು ಕೋರಿಕೆಯನ್ನು ತಿರಸ್ಕರಿಸಲಾಯಿತು.

**ಮರುವಿಚಾರಣೆ - ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ. ಸರಿಯಿದೆ.

**ಪ್ರ. ಸಿವಿಲ್ ಮತ್ತು ಜೆ.ಎಂ.ಎಫ್.ಸಿ.ನ್ಯಾಯಾಧೀಶರು.**
**ಅರಕಲಗೂಡು**